**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.227/2022

**PW**. 10

**CW**. 12

**ಸಾಕ್ಷಿಯ ಹೆಸರು –ಕುಮಾರ ಕೆ ಎಂ**

**ತಂದೆಯ ಹೆಸರು –ಮಲ್ಲೇಗೌಡ**

**ವಯಸ್ಸು –46 ವರ್ಷಗಳು**

ದಿನಾಂಕ 02–08–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಅಲ್ಲನಾಯಕನ ಹಳ್ಳಿ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಈಗ್ಗೆ 4 ವರ್ಷಗಳ ಹಿಂದೆ ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ, ಪೊಲೀಸರು ಒಂದು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ–16 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–16(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**)

**SC No.227/2022**
**PW. 10**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ದಿಃ 04-03-2020 ರಂದು ಬೆಳಗ್ಗೆ 10.00 ರಿಂದ 12.00 ಗಂಟೆಯವರೆಗೆ ಬೆಟ್ಟದಪುರ ಪೊಲೀಸ್ ಠಾಣೆಗೆ ಕರೆಸಿ, ಮೊದಲಿಗೆ ಆರೋಪಿಯನ್ನು ದಸ್ತಗಿರಿ ಮಾಡಿದ್ದು, ಮೊದಲಿಗೆ ಆರೋಪಿಯು ನಮ್ಮನ್ನು ಹಾಗೂ ಪೊಲೀಸರನ್ನು ಬೆಟ್ಟದಪುರ ಸಿಡಿಲು ಮಲ್ಲಿಕಾರ್ಜುನ ಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿ ಕೃಷಿ ಕಛೇರಿಯ ಮುಂಭಾಗ ಆರೋಪಿತಳು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ರವರಿಗೆ ಚಾಕುವಿನಿಂದ ಕೊಲೆ ಮಾಡಲು ಪ್ರಯತ್ನಪಟ್ಟ ವಿಚಾರದಲ್ಲಿ ಪೊಲೀಸರು ನಮ್ಮ ಸಮಕ್ಷಮ ಮಹಜರ್ ಮಾಡಿ, ನಂತರ ಆರೋಪಿಯ ಹೇಳಿಕೆಯ ಮೇರೆಗೆ ಆಕೆ ತೋರಿಸಿದ ಚಾಸಾ-8 ರವರ ಮನೆಯ ಬಳಿ ಕರೆದುಕೊಂಡು ಹೋಗಿ ಆಕೆಯು ಒಳಗಿನಿಂದ ಒಂದು ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಮತ್ತು ಚಾಸಾ-2 ರವರಿಗೆ ಕೃತ್ಯದ ಸಮಯದಲ್ಲಿ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ತಂದು ಹಾಜರುಮಾಡಿದ್ದು, ಅವುಗಳನ್ನು ಪೊಲೀಸರು ವಶಪಡಿಸಿಕೊಂಡು, ನಿಪಿ-16 ರಂತೆ ಪಂಚನಾಮೆ ಮಾಡಿ , ಓದಿ ಹೇಳಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಮೊದಲಿಗೆ ಪಂಚನಾಮೆ ಮಾಡಿದ ಕಾಲಕ್ಕೆ ತೆಗೆದ ಎರಡು ಫೋಟೋಗಳಲ್ಲಿ ನಾನು, ಆರೋಪಿ ಮತ್ತು ಚಾಸಾ-13 ರವರು ಇದ್ದೇವೆ ಎಂದರೆ ಸರಿ. ನಂತರ ಈಗ ನಾಲ್ಕು ಫೋಟೊಗಳನ್ನು ನೋಡುತ್ತಿದ್ದು, ಅದರಲ್ಲಿ ನಾನು, ಆರೋಪಿ, ಚಾಸಾ-8 ರವರು ಇದ್ದೆವೆ ಎಂದರೆ ಸರಿ . ಸದರಿ ಫೋಟೋಗಳನ್ನು ನಿಪಿ-19 ರಿಂದ 22 ಎಂದು ಗುರುತಿಸಲಾಯಿತು. ನಿಪಿ-16 ಪಂಚನಾಮೆ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**SC No.227/2022**
**PW. 10**

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್. ಪಿ ವಕೀಲರಿಂದಃ-**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.